ರೊಮೇನಿಯನ್ನರಿಗಾದರೂ ಅಷ್ಟೆ, ಕಾಯುವುದು ಆಗದ ಕೆಲಸ. ಚೌಸೆಸ್ಕೋ ಅವರ ಸಾವಿಗೂ ಅವರು ಕಾಯಲಿಲ್ಲ. ಡಿಸೆಂಬರ್ 25, 1989 ಕ್ರಾಂತಿಯ ಹತ್ತನೇ ದಿನ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ತಮ್ಮನ್ನು ಇದುವರೆಗೆ ಆಳುತ್ತಿದ್ದ ರಕ್ತಪಿಶಾಚಿಯ ದುರ್ಗದಂತಹ ಅರಮನೆಯನ್ನು ನೋಡಲು ರೊಮೇನಿಯನ್ ಪ್ರಜೆಗಳು ಸಾವಿರಾರು ಸಂಖ್ಯೆಯಲ್ಲಿ ಬಂದರು. ಅರಮನೆ ಬೆಂಕಿಯಲ್ಲಿ ನಾಶವಾಗುವುದನ್ನು ಅವರು ಬಯಸಿದ್ದರು.

1980ರ ಆದಿಭಾಗದಲ್ಲಿ ಈ ಅಗಾಧ ಅರಮನೆಯನ್ನು ನಾಶಮಾಡುವುದೋ ಅಥವಾ ಮಾರುವುದೋ ಎಂಬುದರ ಬಗ್ಗೆ ಬಿಸಿ ಬಿಸಿ ಚರ್ಚೆಗಳಾದವು. ಯಾರಿಗೂ ಅದನ್ನು ಉಳಿಸಿಕೊಳ್ಳಬೇಕೆನ್ನುವ ಇರಾದೆ ಇಲ್ಲವೆನಿಸುತ್ತದೆ. ಅರಮನೆಯ ಇರುವಿಕೆಯನ್ನು ವಿರೋಧಿಸುತ್ತಿದ್ದವರಿಗೆ, ಈ ಅರಮನೆ ಒಂದು ವ್ಯಾಧಿಗ್ರಸ್ತ ಮನಸ್ಸಿನ ಉತ್ಪನ್ನದಂತೆ ಕಂಡು ಅವರು, ಈ ಅರಮನೆಯನ್ನು ಕೆಡವಬೇಕು ಎಂದು ವಾದಿಸುತ್ತಿದ್ದರು. ಆದರೆ, ಹನ್ನೆರಡು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ ಅರಮನೆಯನ್ನು ಕೆಡವುದೂ ಒಂದು ಸಾಹಸದ ಕೆಲಸವೇ. ಕೊನೆಗೆ, ಸರ್ವಾಧಿಕಾರಿಯ ಆಡಳಿತದಲ್ಲಿ ತಮ್ಮ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಳ್ಳುವುದಕ್ಕೆ ಈ ಭವನ ಸಹಾಯ ಮಾಡೀತು, ಅದೊಂದು ರೂಪಕವಾಗಿಯಾದರೂ ಕೆಲಸ ಮಾಡಲಿ ಎನ್ನುವ ಆಶಯದೊಂದಿಗೆ ಅರಮನೆಯನ್ನು ಉಳಿಸಿಕೊಳ್ಳುವ ನಿರ್ಧಾರಕ್ಕೆ ಬರಲಾಯಿತು.

ಇದೆಲ್ಲ ನಡೆಯುವಾಗ, ಕ್ರಾಂತಿ ಮುಗಿಯುತ್ತ ಬಂದಂತೆ, ಆಸ್ಟ್ರೇಲಿಯಾದ ಮಾಧ್ಯಮ ದೊರೆ ರುಪರ್ಟ್ ಮರ್ಡೋಕ್ ಆರು ಸಾವಿರ ಕೋಟಿ ಡಾಲರ್ ಮೊತ್ತ ಕೊಟ್ಟು ಈ ಅರಮನೆಯನ್ನು ಖರೀದಿಸಲು ಮುಂದೆ ಬಂದರು.

ರೊಮೇನಿಯನ್ನರು ಸಾಕಾಗದು ಎಂದರು.

ಜಪಾನೀ ಸರ್ಕಾರ ಇನ್ನೂ ಹೆಚ್ಚು ಮೊತ್ತ ಕೊಡಲು ಮುಂದೆ ಬಂದಿತು.

ರೊಮೇನಿಯನ್ನರು ಅದನ್ನೂ ತಿರಸ್ಕರಿಸಿದರು.

ರೊಮೇನಿಯನ್ನರು ನಿರ್ಧರಿಸಿದರು. ಈ ಅರಮನೆ ನಮ್ಮದು, ಉಳಿದ ಕೆಲಸಗಳನ್ನು 1996ರ ಒಳಗೆ ಮುಗಿಸುವುದೆಂದೂ ನಿರ್ಧರಿಸಿದರು. ಅರಮನೆಯ ಸುತ್ತ ಇದ್ದ, ಚೌಸೆಸ್ಕೋ ಇನ್ನೂ ಕಟ್ಟದೆ ಉಳಿದಿದ್ದ ವಿಶಾಲ ಜಾಗವನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವುದರ ಬಗ್ಗೆ ಒಂದು ಸ್ಪರ್ಧೆ ಏರ್ಪಡಿಸಲಾಯಿತು.

ಮೂವತ್ತ ಮೂರು ರಾಷ್ಟ್ರಗಳಿಂದ ಬಂದಿದ್ದ ವಾಸ್ತುಶಿಲ್ಪಿಗಳು ಇನ್ನೂರ ಮೂವತ್ತೈದು ಯೋಜನೆಗಳನ್ನು ಸಲ್ಲಿಸಿದರು. ಒಂದು ಅಂತರರಾಷ್ಟ್ರೀಯ ತೀರ್ಪುಗಾರ ಮಂಡಳಿ ಅವೆಲ್ಲವನ್ನೂ ಪರಿಶೀಲಿಸಿ, ಒಂದು ಜರ್ಮನ್ ಯೋಜನೆಯನ್ನು ಆರಿಸಿದರು. ಆ ಅರಮನೆಯನ್ನು ಪ್ರಜೆಗಳಿಗೆ ಹತ್ತಿರವಾಗುವಂತೆ ಹೇಗೆ ಬಳಸಬೇಕೆಂದು ಆದೇಶಿಸಲಾಯಿತು. ಅರಮನೆಯ ಸುತ್ತ ಇದ್ದ ರಾಕ್ಷಸಾಕಾರದ ಬೇಲಿಯನ್ನು ತೆಗೆಯಬೇಕು ಮತ್ತು ಅರಮನೆಯ ಅಗಾಧತೆಗೆ ಪೂರಕವಾಗುವಂತೆ ಸುತ್ತಲಿನ ಕಟ್ಟಡಗಳ ವಿನ್ಯಾಸ ಮಾಡಬೇಕೆಂದು ನಿರ್ಧರಿಸಲಾಯಿತು.

ತೀರ್ಪುಗಾರರ ಮಂಡಲಿ ತನ್ನ ಅನುಮೋದನೆಯನ್ನು ನೀಡಿತು. ಇದೇ, ಇದೇ ಬುಖಾರೆಸ್ಟಿಗೆ ಬೇಕಾಗಿರುವುದು.

ಎಲ್ಲರೂ ಈ ಯೋಜನೆಯನ್ನು ಮನಸಾರೆ ಹೊಗಳಿದರು. ನಂತರ ಆ ಯೋಜನೆಯನ್ನು ಯಾವುದೋ ಟೇಬಲ್ಲಿನ ಡ್ರಾಯರ್‌ನಲ್ಲಿಡಲಾಯಿತು. ಸ್ಪರ್ಧೆಗೆ ಖರ್ಚಾಗಿದ್ದು 96 ಕೋಟಿ